


ಇಟ್ಟನೋ ತಿಳಿಯದು. ಅದೇ ನಮ್ಮ ಪ್ರಾಣಕ್ಕೆ ಕುತ್ತು ತರುತ್ತಿದೆ. ಮನೆಯಲ್ಲಿ ಅಲ್ಲಲ್ಲಿ ಅಡಗಿ ಕುಳಿತಿರುವ ನಮ್ಮ ಕುಲಬಾಂಧವರೆಲ್ಲ ಜೀವ ಕೈಯಲ್ಲಿ ಹಿಡಿದು ಬದುಕಬೇಕಾಗಿದೆ. ಮನೆಯಲ್ಲಿ ಇದ್ದೂ ಇರದಂತಿರುವ, ಕಂಡೂ ಕಾಣದಂತಿರುವ ನಮ್ಮ ಮೇಲೆ ಇಷ್ಟೊಂದು ದ್ವೇಷ ಸರಿಯೇ ನೀವೇ ಯೋಚಿಸಿ.

ಡೆಂಗಿ ಆಪಾದನೆಯನ್ನು ನಮ್ಮಹೆಣ್ಣು ಸಂತಾನದ ಮೇಲೆ ಹೊರಿಸಲಾಗುತ್ತಿದೆ ಮತ್ತು ಹಗಲು ಹೊತ್ತಿನಲ್ಲಿ ನಾವು ಕಚ್ಚಿದರೆ ಡೆಂಗಿ ಬರುತ್ತದೆಯಂತೆ. ರಾತ್ರಿ ಹೊತ್ತು ನಮಗೆ ಸಾಕಷ್ಟು ಆಹಾರ ಸಿಕ್ಕರೆ ಹಗಲು ಹೊತ್ತು ಕಚ್ಚಲು ನಮಗೇನು ಹುಚ್ಚೇ?. ಮಲೇರಿಯಾ ರೋಗದ ಆಪಾದನೆಯನ್ನು ಅನಾಫಿಲಿಸ್ ಎಂದು